# ಪ್ರಸನ್ನವೆಂಕಟದಾಸರು

-Contributed by Sri Pranesh -Bangalore

೧

ಆಗಲಿ ಹರಿಕೃಪೆ ಭಾಗವತರ ಸಂಗ
ನೀಗುವೆ ನಿಮ್ಮ ದುರಿತಗಳಿರ ಪ.
ಹರಿನಂಟರೋಲೈಸಿ ಜ್ಞಾನಾಸ್ತ್ರ ಗಳಿಸುವೆ
ಹರಿನಾಮ ವಜ್ರಕವಚ ತೊಡುವೆ
ಹರಿ ನಿರ್ಮಾಲ್ಯದ ಉತ್ತಮಾಂಗಾಭರಣವಿಟ್ಟು
ನೆರೆ ನಿಮ್ಮ ನಾಮ ನಿರ್ನಾಮವ ಮಾಳ್ವೆ ೧
ಶ್ರೀಲೋಲನಂಘ್ರಿ ಸಮ್ಮದ ಸೈನ್ಯವ ಕೂಡಿ
ತಾಳ ದಂಡಿಗೆ ಗೀತಾಯುಧಗಳಿಂದ
ಕಾಲಕಾಲಕೆ ನಿಮ್ಮ ಮೇಳವ ಮುರಿದಾಡಿ
ಹಾಳು ಮಾಡುವೆ ಕೈಯಲಿ ಕಡ್ಡಿ ಕೊಡುವೆ ೨
ಇಕ್ಷು ಸ್ವಾದಾದರೆ ಬೇರಸಹಿತ ನೀವು
ಭಕ್ಷಿಸಬೇಡಿ ಬಾರದೆ ಮರಳಿ
ಪಕ್ಷಿಗಮನ ಪ್ರಸನ್ನವೆಂಕಟೇಶನ
ಪಕ್ಷದವರ ಹಗೆ ಹೊಲ್ಲಸಲ್ಲ ೩

೨

ಆನೆ ಬಂತಾನೆ ಬಂತಾನೆ ಬಂತಮ್ಮ
ದಾನವಕದಳಿಯ ಕಾನನ ಮುರಿವ ಮದ್ದಾನೆ ಬಂತಮ್ಮ ಪ.
ಉಂಗುರುಗುರುಳು ನೀಲಾಂಗ ಚೆಲ್ವಾನೆ
ಕಂಗಳು ಹೊಳೆವೊ ವ್ಯಾಘ್ರಾಂಗುಲಿಯಾನೆ
ಬಂಗಾರದಣುಗಂಟೆ ಶೃಂಗಾರದಾನೆ
ಮಂಗಳತಿಲಕದ ರಂಗನೆಂಬಾನೆ ೧

ಅಲೆದೊಲೆದಾಡುವ ಎಳೆಮರಿಯಾನೆ

ಕೆಳದಿ ಗೋಪಿಯರೊಳು ಗೆಳೆತನದಾನೆ

ಘಳಿಲು ಘಳಿಲು ರವದಿ ಸುಳಿದಾಡುವಾನೆ

ಮಲೆತವರೆದೆ ತುಳಿದಾಡುವಾನೆ ೨

ನಳಿನಭವರಿಗೆ ತಾ ನಿಲುಕದ ಆನೆ

ಹಲವು ಕವಿಗಳಿಗೆ ಸಿಲುಕದೀ ಆನೆ

ನಲವಿಂದ ಭಕ್ತರ ಸಲಹುವ ಆನೆ

ಸಲೆ ಪ್ರಸನ್ವೆಂಕಟನಿಲಯನೆಂಬಾನೆ ೩

೩

ಎಂಥ ಶ್ರೀಮಂತಾನಂತನೆ ಶ್ರೀಕಾಂತೆಯ ಕಾಂತ

ಎಂಥ ಶ್ರೀಮಂತಾನಂತನೆ ಪ.

ಬೊಮ್ಮನು ಹೆಮ್ಮಗ ಮೊಮ್ಮ ಮೃಡಮ್ಮರಿ

ಮೊಮ್ಮ ಶಚಿಮನೋರಮ್ಮ ಸ್ಮರಮ್ಮಗ

ಅಮ್ಮರಸಮ್ಮೂಹ ನಿಮ್ಮನುಗಮ್ಯರು

ನಮ್ಮೊ ನಮ್ಮೊ ಪರಮ್ಮ ಮಹಿಮ್ಮ ೧

ಪನ್ನಗಾಪನ್ನ ಶಯನ್ನಕ್ಕೆ ಬೆನ್ನೀವ

ಪನ್ನಗಾಶನ್ನ ವಾಹನ್ನ ರತುನ್ನ ಭ

ವನ್ನ ಸುಖೋನ್ನತರನ್ನಾಗರ ನಿಜ

ನಿನ್ನಿದಿರಿನ್ನಾರೆನ್ನೊಡೆಯನ್ನೆ ೨

ಬಲ್ಲ ಕೈವಲ್ಯಜ್ಞರೊಲ್ಲಭ ಸುಲ್ಲಭ

ಬಲ್ಲಿದ ಕ್ಷುಲ್ಲರದಲ್ಲಣನಲ್ಲವೆ

ಹುಲ್ಲಲುಗಲಳವಲ್ಲ ನೀನಿಲ್ಲದೆ

ಸಲ್ಲದು ಸೊಲ್ಲದು ನಿಲ್ಲದಿದೆಲ್ಲ ೩

ಅಂಗಕೆ ಹೆಂಗಳಾಲಿಂಗನಾಂತ ಗಡ

ಮಂಗಳಾಪಾಂಗ ವಿಶ್ವಂಗಳ ಮಂಗಳ

ಸಿಂಗರದುಂಗುಟ ಸಂಗದಗಂಗೆ ಜ

ಗಂಗಳಘಂಗಳ ಹಿಂಗಿಪಳು ರಂಗ ೪

ಅಂಬರದಂಬುಗೆ ತುಂಬೆ ವಿಶ್ವಂ ಬಸು

ರಿಂಬಿಲಿ ಇಂಬಿಟ್ಟುಕೊಂಬ ಕೃಪಾಂಬುಧಿ

ಡಿಂಬಕದಂಬದ ಬಿಂಬ ಪ್ರಸನ್ವೆಂಕಟ

ನಂಬಿದರ್ಗಿಂಬೀವನೆಂಬ ಕುಟುಂಬಿ ೫

೪

ಎಂದು ಕಾಂಬುವೆ ಎನ್ನ ಸಲಹುವ

ತಂದೆ ಉಡುಪಿಯ ಜಾಣನ

ಮಂದಹಾಸ ಪ್ರವೀಣನ

ಇಂದಿರಾ ಭೂರಮಣನ ಪ.

ಕಡಲ ತಡಿಯೊಳು ಎಸೆವ ರಂಗನ

ಕಡೆಗೋಲ ನೇಣ ಪಿಡಿದನ

ಮೃಡ ಪುರಂದರ ಅಜರೊಡೆಯನ ಈ

ರಡಿಗಳಲಿ ಶಿರ ಇಡುವೆ ನಾ ೧

ದೇವಕಿಯ ಜಠರದಲ್ಲಿ ಬಂದನ

ಆವಪಳ್ಳಿಯಲ್ಲಿ ನಿಂದನ

ಮಾವ ಕಂಸನ ಕೊಂದನ

ಕಾವನಯ್ಯ ಮುಕುಂದನ ೨

ಪೂರ್ಣಪ್ರಜ್ಞರಿಗೊಲಿದು ದ್ವಾರಕೆಯ

ಮಣ್ಣಿನೊಳು ಪ್ರಕಟಿಸಿದನ ಭ

ವಾರ್ಣವಕೆ ಪ್ಲವನಾದನ ಪ್ರ

ಸನ್ನವೆಂಕಟ ಕೃಷ್ಣನ ೩

೫

ಕರ್ತ ಕೃಷ್ಣಯ್ಯ ನೀ ಬಾರಯ್ಯ ಎ

ನ್ನಾರ್ತ ಧ್ವನಿಗೊಲಿದು ಬಾರಯ್ಯ ಪ.

ಸುಗುಣದ ಖಣಿಯೆ ನೀ ಬಾರಯ್ಯ ನ

ಮ್ಮಘವನೋಡಿಸಲು ನೀ ಬಾರಯ್ಯ

ಧಗೆಯೇರಿಸಿತು ತಾಪ ಸುಧಾ

ಮುಗುಳ್ನಗೆ ಮಳೆಗರೆಯೆ ಬಾರಯ್ಯ ೧

ವೈರವರ್ಗದಿ ನೊಂದೆ ಬಾರಯ್ಯ ಮ

ತ್ತಾರು ಗೆಣೆಯರಿಲ್ಲ ಬಾರಯ್ಯ

ಸೇರಿದೆ ನಾ ಶರಣ್ಯ ಬಾರಯ್ಯ ಒಳ್ಳೆ

ದಾರಿಯ ತೋರಲು ನೀ ಬಾರಯ್ಯ ೨

ವೈರಾಗ್ಯ ಭಾಗ್ಯ ಕೊಡು ಬಾರಯ್ಯ ಜ್ಞಾ

ನಾರೋಗ್ಯದ ಭೇಷಜ ಬಾರಯ್ಯ

ಜಾರುತದಾಯು ಬೇಗ ಬಾರಯ್ಯ ಉ

ದಾರಿ ಪ್ರಸನ್ವೆಂಕಟಪ ಬಾರಯ್ಯ ೩

೬

ಕಾಯೊ ಗೋವಿಂದ ಕಾಯೊ ಮುಕುಂದ

ಮಾಯದ ತಡಿಯ ತಪ್ಪಿಸೊ ನಿತ್ಯಾನಂದ ಪ.

ನಾನಾ ಯೋನಿಯ ಸುತ್ತಿ ನೆಲೆಗಾಣದಂತಾದೆ

ನೀನೊಲಿದಿಂದೀ ಜನ್ಮವ ಪಡೆದೆ

ಜ್ಞಾನ ಹೊಂದಲಿಲ್ಲ ಧರ್ಮದಾಚರಣೆಲ್ಲ

ಏನು ಗತಿಯೊ ಎನಗೆ ಮುಂದೆ ಸಿರಿನಲ್ಲ ೧

ಮರ್ಕಟಗೆ ಹೊನ್ನಕೊಡ ದೊರೆತಂತಾಯಿತು

ಮೂರ್ಖವೃತ್ತಿಯಲಿ ಆಯುಷ್ಯ ಹೋಯಿತು

ನರ್ಕ ಸಾಧನ ಘನವಾಗಿದೆ ಪುಣ್ಯ ಸಂ

ಪರ್ಕವ ಕಾಣೆನೈ ಕರುಣೆಗಳರಸ ೨

ಎನ್ನ ತಪ್ಪಿನ ಹೊಳೆ ಒಳಗೊಂಬುದು ಒಂದೆ

ನಿನ್ನ ದಯದ ಶರಧಿಯಲ್ಲದೆ

ಇನ್ನೇನು ಮಾರ್ಗವು ಸಿಲುಕದು ತಂದೆ ಪ್ರ

ಸನ್ನವೆಂಕಟಪತಿ ಹರಿ ದೀನಬಂಧು ೩

೭

ಗೋವಿಂದ ಗೋವಿಂದ ಗೋವಿಂದ ನನ್ನ

ತಾಯಿ ತಂದೆ ಗೋವಿಂದ ಪ.

ತಿರುಗಿ ಭವದಲಿ ಗೋವಿಂದ ವೃಥಾ

ಮರುಗಿ ಬಳಲಿದೆನೊ ಗೋವಿಂದ

ಕರಗಿ ತಾಪದಿ ಗೋವಿಂದ ಸಿಡಿ

ಲೆರಗಿಸಿಕೊಂಡೆನೊ ಗೋವಿಂದ ೧

ಎಚ್ಚರ ಹಾರಿತು ಗೋವಿಂದ ನಾ

ಮೆಚ್ಚಿದೆ ವಿಷಯಕೆ ಗೋವಿಂದ

ಹುಚ್ಚು ಮಾಡಿತು ಮನ ಗೋವಿಂದ ನಿ

ನ್ನುಚ್ಚರಣಡಗಿತು ಗೋವಿಂದ ೨

ಆಸೆಯ ಬಿಡಿಸೈ ಗೋವಿಂದ ನಿನ್ನ

ದಾಸರೊಳಿರಿಸೈ ಗೋವಿಂದ

ಪ್ರಸನ್ನವೆಂಕಟ ಗೋವಿಂದ ಭವ

ಘಾಸಿಯ ತಪ್ಪಿಸು ಗೋವಿಂದ ೩

೮

ಚಿಂತೆಯ ಪರಿಹರಿಸೊ ತಿಮ್ಮಯ್ಯ

ಚಿಂತಾಯಕ ಕಂತು ಕಮಲೆಯ ರಾಯ ಪ.

ಸಾಧ್ಯವಲ್ಲದುದನ್ನು ಹಂಬಲಿಸಿ

ಬುದ್ಧಿಭ್ರಾಂತಿಲಿ ಬಲು ಸುಖ ಬಯಸಿ

ಕದ್ದ ಕಳ್ಳನಂತೆ ವೃಥಾ ಕುದಿದೆ

ಮದ್ದು ಮೆದ್ದಿಲಿಯಂತೆ ಬಳಲಿದೆ ೧

ತಿಳದು ಮಾಯದ ಬಲೆಗೆ ಮೈಗೊಟ್ಟೆ

ಬೆಲೆಗಟ್ಟಿ ವೃಥಾ ಹುಚ್ಚು ದೈನ್ಯಬಟ್ಟೆ

ಆಲಿಸಿ ಮೋಕ್ಷದ ನೆಲೆಯ ಕೇಳದೆ ನಾ

ಕಳವಳಗೊಂಬೆ ಕರುಣಾಸಂಪನ್ನ ೨

ಚಿಂತೆಗೆ ಚಿಂತೆ ಸಹಾಯವಾಗಿ

ಅಂತರಂಗದ ಕ್ಲೇಶ  ಹೇಸಿತು ಬಾಗಿ

ಶಾಂತಮೂರ್ತಿ ಪ್ರಸನ್ವೆಂಕಟೇಶ ಏ

ಕಾಂತದಾಸರ ನೆಳಲನೆ ತೋರಿಸೊ ೩

೬

ತಪ್ಪುಗಳೆಲ್ಲ ಪರಿಹರಿಸುವ ನ

ಮ್ಮಪ್ಪನಲ್ಲವೆ ನೀನು

ಒಪ್ಪಿದ ಬಳಕವಗುಣ ನೋಡದ ತಿ

ಮ್ಮಪ್ಪನಲ್ಲವೆ ನೀನು ಪ.

ಬೆಳಗಿನ ಜಾವದಿ ಹರಿ  ನಿನ್ನ ಸ್ಮರಣೆಗೆ

ಹಳವಿಗೆಗೊಳ್ಳದ ತಪ್ಪು

ಮಲಮೂತ್ರವಿಸರ್ಜನೆಯ ಮೃತ್ತಿಕೆಯಲಿ

ಮಲಿನವ ತೊಳೆಯದ ತಪ್ಪು

ತುಲಸಿ ವೃಂದಾವನ ಗೋಸೇವೆಗೆ

ಅಲಸಿಕೆ ಮಾಡುವ ತಪ್ಪು

ನಳನ  ಸಖೋದಯಕರ್ಘ್ಯವ ನೀಡದ

ಕಲಿವ್ಯಾಸಂಗದ ತಪ್ಪು ೧

ದಿನದಿನ ಉದಯದಿ ಸ್ನಾನವ ಮಾಡದ

ತನುವಂಚನೆಯ ತಪ್ಪು

ಕ್ಷಣ ಶ್ರೀ ಹರಿಗುಣ ಜಿಜ್ಞಾಸಿಲ್ಲದ

ಮನವಂಚನೆಯ ತಪ್ಪು

ಮುನಿಸುರ ಭೂಸುರರಾರಾಧಿಸದ

ಧನ ವಂಚನೆಯ ತಪ್ಪು

ವನಜಾಕ್ಷನೆ ನಿನ್ನ ಪಾದ  ವಿಮುಖ ದು

ರ್ಜನ ಸಂಸರ್ಗದ ತಪ್ಪು ೨

ಕಣ್ಣಲಿ ಕೃಷ್ಣಾಕೃತಿ ನೋಡದೆ ಪರ

ಹೆಣ್ಣಿನ ನೋಟದ ತಪ್ಪು

ನಿನ್ನ ಕಥಾಮೃತ ಒಲ್ಲದೆ ಹರಟೆಯ

ಮನ್ನಿಸುವ ಕಿವಿ ತಪ್ಪು

ಅನ್ನವ ನಿನಗರ್ಪಿಸದಲೆ ಹರುಷದಿ

ಉಣ್ಣುವ ನಾಲಿಗೆ ತಪ್ಪು

ಚಿನ್ಮಯ ಚರಣಕ್ಕೆರಗದೆ ಉನ್ಮತ್ತ

ರ ನಮಿಸುವ ತಲೆ ತಪ್ಪು ೩

ಶ್ರೀ ನಿರ್ಮಾಲ್ಯದ ವಿರಹಿತ ಸುರಭಿಯ

ಘ್ರಾಣಿಪ ನಾಸಿಕ  ತಪ್ಪು

ಆನಂದದಿ ಸಂಕೀರ್ತನೆ ಮಾಡದ

ಹೀನವಿವಾದದ ಬಾಯ ತಪ್ಪು

ಶ್ರೀನಾಥಾರ್ಚನೆ ಇಲ್ಲದೊಳಗ

ಮಾಣದಿರುವ ಕೈ ತಪ್ಪು

ಶ್ರೀನಾರಾಯಣ ವೇಶ್ಮನಿಗೈದದ

ನಾನಾಟನ ಪಾದ   ತಪ್ಪು ೪

ಯಜ್ಞಾತ್ಮಗೆ ಯಜ್ಞಾರ್ಪಿಸದೆ ಸುಖ

ಮಗ್ನಾದ ಮೇಢ್ರದ ತಪ್ಪು

ಅಗ್ರದ ಕರ್ಮವ ಶೌಚವ ಜರಿದ ಸ

ಮಗ್ರ ಗುಹ್ಯಕೃತ ತಪ್ಪು

ಅಜ್ಞಾನ ಜ್ಞಾನದಿ ಕ್ಷಣಲವಶತ

ವೆಗ್ಗಳಘ ಗಳಿಸುವ ತಪ್ಪು

ಯಜ್ಞೇಶ ಪ್ರಸನ್ವೆಂಕಟ ಕೃಷ್ಣ ನಾ

ಮಾಗ್ನಿಗೆ ತೃಣವೀ ತಪ್ಪು ೫

೧೦

ದಡ ಸೇರಿಸು ಭವದ ಕಡಲಿನ

ದಡ ಸೇರಿಸು ಹರಿಯೆ

ಕಡೆ ಮೊದಲಿಲ್ಲದ ಕ್ಲೇಶದ ವಾರಿಯ

ಕಡು ಕಾಂಕ್ಷದ ಬಲುತೆರೆಯ ಪ.

ಸಾಧು ಸಮಾಗಮ ಸಚ್ಛಾಸ್ತ್ರ ಶ್ರವ

ಣಾದಿಗಳಿಲ್ಲದೆ ಕೆಡುವೆ

ಮೇದಿನಿಯೊಳು ಮೂಢಾತ್ಮನು ನಾ ಶ್ರೀ

ಪಾದವ ಹೊಂದಿಸು ಹರಿಯೆ ೧

ಸಾಸಿರ ನಾಮದಿ ತುಲಸೀ ಕುಸುಮವ

ಶ್ರೀಶನಿಗರ್ಪಿಸಲಿಲ್ಲ

ಹೇಸದೆ ಬಾರದುದನ್ನೆ ಬಯಸುತ

ವಾಸುದೇವ ಕೆಟ್ಟೆನಲ್ಲ ೨

ಮನ ವಶವಾಗದು ತನು ಮಡಿಯಾಗದು

ಕನಸಲಿ ಧರ್ಮವನರಿಯೆ

ಒಣಮಾತಲಿ ದಿನ ಹೋದವು ಪರಗತಿ

ಗನುಕೂಲಲ್ಲದು ದೊರೆಯೆ ೩

ದುರ್ವ್ಯಸನಕೆ ಬೇಸರೆನೆಂದಿಗೆ ಘನ

ಗರ್ವಿಲಿ ವರ್ತಿಪೆನಲ್ಲ

ಪರ್ವತ ನೆಗಹುವ ನುಡಿಯನ್ನಾಡುವೆ

ನಿರ್ವಾಹ ಕಡ್ಡಿಯೊಳಿಲ್ಲ ೪

ನನ್ನ ಗುಣದ ನಂಬಿಕೆ ನನಗಿಲ್ಲ

ನಿನ್ನಯ ನಾಮವೆ ಗತಿಯು

ಇನ್ನಾದರು ಕಡೆಗಣ್ಣಲೆ ನೋಡು ಪ್ರ

ಸನ್ವೆಂಕಟ ಸಿರಿಪತಿಯೆ ೫

೧೧

ನೀ ಕರುಣಿಸೊ ವಿಠಲ ನಮ್ಮ

ಸಾಕೊ ಪಂಡರಿ ವಿಠಲ ಪ.

ದೋಷಿಗಳೊಳಗೆ ಹಿರಿಯನು ನಾ ನಿ

ರ್ದೋಷಿಗಳರಸನೆ ವಿಠಲ

ಸಾಸಿವೆಯಷ್ಟು ಭಕುತಿಯನರಿಯೆನು

ಶೇಷಶಯನ ಶ್ರೀ ವಿಠಲ ೧

ಭವಸಾಗರದೊಳು ಮುಳುಗುವೆ ಸುಮ್ಮನೆ

ಅವಲೋಕಿಸುವರೆ ವಿಠಲ

ನವ ನವ ವಿಷಯಕೆ ಮುಗ್ಗುತಲಿಹ ಮನ

ದವಸರ ಕಾಯೊ ವಿಠಲ ೨

ತನುಸಂಬಂಧಿಗಳತಿ ಕಾರ್ಯಾರ್ಥಿಗಳ್

ಎನಗಾರಿಲ್ಲೊ ವಿಠಲಾ

ಬಿನಗು ಮಾನವರನುಸರಣೆಯಲಿ

ದಣಿಸದಿರಯ್ಯ ವಿಠಲ ೩

ನಿಶಿದಿನ ಅಶನ ವಸನಕೆ ಹೆಣಗುವೆ

ಹುಸಿ ಸಂಗ್ರಹಿಸಿದೆ ವಿಠಲ

ನಿಶಿದ್ಧಗಳಂಜಿಕೆ ಇಲ್ಲವು ನರಕದ

ಗಸಣೆಗೆ ಅಂಜುವೆ ವಿಠಲ ೮

ಜಾವಕೆ ಮಾಡುವೆ ಸಾವಿರ ತಪ್ಪನು

ಕಾವ ದಯಾಂಬುಧಿ ವಿಠಲ

ನಾ ವಡಲ್ಹೊಕ್ಕೆನೊ ಪ್ರಸನ್ವೆಂಕಟಪತಿ

ಜೀವಕೆ ಹೊಣೆ ನೀ ವಿಠಲ ೫

೧೨

ನೋಡಬಾರದೆ ಕೃಷ್ಣಾ ಕರುಣದಿ

ನೋಡಬಾರದೆ ಕೃಷ್ಣ

ಹಾಡಿ ಹರಸಿ ನಿನ್ನನೆ ಹೊಗಳುವ ಪರಿ

ಮಾಡಬಾರದೆ ಹರಿಯೆ ಪ.

ಹಾನಿ ಹಿತಗಳನರಿಯೆ ಸು

ಜ್ಞಾನ ಭಕುತಿಗಳರಿಯೆ

ದೀನ ದೇಶಿಗನುದ್ಧರಿಸೆಲೆ ದೇವ

ಸಾನುರಾಗದಿ ದೇವ ೧

ಏಸು ಜನ್ಮದಿ ಬಂದೆ ನಾ

ಘಾಸಿಯಾದೆನೊ ತಂದೆ

ದಾಸರೊಳು ಆವಕಾಲಭಿ

ಲಾಷೆಯುಳ್ಳ ಶ್ರೀಲೋಲ ೨

ಏನು ಹೇಳಲಿ ಮನವು ನಿನ್ನ

ಧ್ಯಾನಕೊದಗದು ಕ್ಷಣವು

ತಾನೆ ಹರಿದಡೆ ಕೇಡು ಅದರಿಂದ

ಪ್ರಾಣನಾಥ ಮುಕುಂದ ೩

ಕುಂಬಳವು ಕೈಗತ್ತಿ ಕ

ರಾಂಬುಜಕೆ ನಿನಗಿತ್ತೆ

ನಂಬಿದವಗಿನ್ನೇನಾರೆ ಮಾಡಯ್ಯ

ಅಂಬುಜಜ ಸ್ಮರರಯ್ಯ ೪

ಕಿಂಕರೌಘದೊಳಡೊ ನಿ

ಶ್ಶಂಕನೆ ದಯಮಾಡೊ

ಪಂಕಜಾಕ್ಷ ಮುರಾರಿ ಪ್ರಸನ್ನ

ವೆಂಕಟಾದ್ರಿ ಪಾವನ್ನ ೫

೧೩

ಬಿಡೆ ನಿನ್ನ ಚರಣವ ಉಡುಪಿ ಕೃಷ್ಣನೆ ಭವ

ಕಡಲ ದಾಟಿಸು ಕೈಯಪಿಡಿದು ಪಾಲಿಸು ತಂದೆ ಪ.

ಧ್ರುವ ಶುಕ ಪ್ರಹ್ಲಾದ ಬಲಿ ಅಜಾಮಿಳನು

ದ್ಧವ ಅಂಬರೀಷ ವಿದುರ ಮುಖ್ಯರು

ತವ ಪಾದವಿಡಿಯಲವರಿಗಿಂಬು ನೀಡ್ದ

ಹವಣವ ಬಲ್ಲೆ ನಾನೇನ ಮಾಡಿದರೇನ ೧

ಪಾಂಚಾಲಿ ಮಾನವ ಕಾಯ್ದೆ ಪೆರರಿಗಂದು

ಅಚ್ಯುತ ನಿನ್ನಂಗುಟವು ಸೋಂಕಲು

ನಿಚ್ಚಳ ಸತಿಯಾದಳೆಂಬ ಸಾಹಸ ಕೇಳಿ

ಮುಚ್ಚು ಮರೆಯ ಮಾಡಿದರೆ ನಿಮ್ಮ ಮರೆಯೆನು ೨

ನಿನ್ನ ಪಾದಾಂಬುಜ ಧ್ಯಾನ ಮರೆಯದಂತೆ

ಎನ್ನ ಮನದ ವಕ್ರಗತಿಯ ತಿರ್ದು

ಮನ್ನಿಸು ತಂದೆ ಪ್ರಸನ್ನವೆಂಕಟ ಕೃಷ್ಣ

ಪೂರ್ಣಪ್ರಜ್ಞಾರ್ಚಿತ ಚರಣಕಮಲನೆ ೩

೧೪

ರಂಗ ಕೊಳಲ ನೂದಲಾಗಿ

ಮಂಗಳ ಮಯವಾಯಿತು ಧರೆ ಜ

ಗಂಗಳ ಜೀವರು ಚೇತನ ಮರೆದು ರಂಗಧ್ಯಾನ ಪರರಾದರು ಪ.

ಬಾಡಿದ ಬಳ್ಳಿಮರ ಗೊನೆ ಒಡೆದು

ತೀಡುವ ಮಂದಮಾರುತನ ಕೂಡಿ ತೂ

ಗ್ಯಾಡಿದವಲರ ಫಲದ ಗೊಂಚಲು ಹಾಡಲೊಲ್ಲವಳಿ ಕುಲಗಳು

ಹೇಡಿಗೊಂಡವು ಜಾಣ್ಣಕ್ಕಿ ಗಿಣಿಯು ಮಾ

ತಾಡದೆ ಗಳಗುಂದಿದವು ಕೋಗಿಲೆ

ಓಡ್ಯಾಟ ವೈರಾಟ ಬಿಟ್ಟು ಖಗಮೃಗವೆಲ್ಲ ಗಾಢ ನಿದ್ರಾವಶವಾದವು ೧

ಕೆಳಗಿನುದಕುಬ್ಯುಬ್ಬಿ ಬಂದವು

ತುಳುಕಿ ಚೆಲ್ಲಾಡಿ ನಿಂತಳು ಯಮುನೆ

ಮೇಲೊಡ್ಡೊಡ್ಡಿ ಮೇಘಾಳಿ ಧಾರಿಟ್ಟವು ಕಲ್ಲು ಕರಗಿ ನೀರಾದವು

ನಳಿನ ಚಂಪಕ ನಾಗ ಪುನ್ನಾಗ ಪಾ

ಟಲ ಶಾವಂತಿಗೆ ಕುಂದ ಬಕುಳವು

ಮಾಲತಿ ಜಾಜಿಯು ಪರಿಮಳಗೂಡಿ ನೀಲಾಂಗನಂಘ್ರಿಗೆ ನೆರೆದವು ೨

ಕೆಚ್ಚಲು ಬಿಗಿದು ತೊರೆದ ಮೊಲೆಯಿಂ

ವತ್ಸಗಳೊಡಲಾಸೆ ಜರಿದೆಳಹುಲ್ಲ

ಕಚ್ಚಿ ಅಲ್ಲಿಗಲ್ಲಿಗೆ ನಿಂತವು ತಲೆಯ ಪುಚ್ಛವ ನೆಗಹಿ ನಿಟ್ಟಿಸಿ

ಅಚ್ಯುತನಾ ಕೃತ್ಯ ನೋಡಲು ಸುರರಿ

ಗಚ್ಚರಿಯಾಯಿತು ಆವು ಕಂಡಾನಂದ

ಹೆಚ್ಚಿ ಮುಕುಂದನ ಲೀಲಾವಿನೋದಕೆ ಮೆಚ್ಚಿ ಕುಸುಮವ ಸುರಿದರು ೩

ಮುದ್ದು ಮೋಹನನ ಮಂಜುಳ ಸಂಗೀತ

ಸದ್ದನಾಲಿಸಿ ಗೋಪಾಂಗನೆರೆಲ್ಲರು

ಬುದ್ಧಿ ಸೂರ್ಯಾಡಿದರಾನಂದವಾರಿಧಿಯಲ್ಲಿ ಬಿದ್ದು ಪರವಶರಾದರು

ಸಿದ್ಧ ಮುನಿಜನರಿದ್ದ ಸಮಾಧಿಯೊ

ಳೆದ್ದೆದ್ದು ಕುಣಿದು ಎದೆದಾವರೆಯ

ಗದ್ದುಗೆಯರಸನೊಲಿಸಿಕೊಂಡರು ಗೆದ್ದರು ಭವಸಮುದ್ರವ ೪

ಶ್ರೀ ಮನೋಹರ ಮೂರುತಿ ಗೋಪಾಲನು

ಆ ಮಧುಕುಂಜವನದಲ್ಲಿ ತ್ರಿಭಂಗಿಲಿ

ಹೇಮಾಂಬರುಟ್ಟು ಗೀರುಗಂಧ ಕಸ್ತೂರಿನಾಮ ಮುಕುಟ

ಕುಂಡಲ್ವೆಳಗಲು ದಾಮ ವನಮಾಲೆ ರತ್ನಾಭರಣದ

ಸ್ವಾಮಿ ಶ್ರೀ ಪ್ರಸನ್ವೆಂಕಟ ಕೃಷ್ಣನು

ರಾಮಕ್ರಿಯೆ ಗುಂಡಕ್ರಿಯೆ ಮೇಘರಾಗವ ಮಾಡೆ ಸಾಮವೇದ

ನಮೊ ನಮೊ ಎನ್ನೆ ೫

೧೫

ರಾಮನ ನೋಡಿರೈ ರಘುಕುಲ

ಸೋಮನ ಪಾಡಿರೈ ಪ.

ಜೀಮೂತ ಶ್ಯಾಮಲಕಾಯ ಜನಕ

ಜಾಮಾತ ಸೀತಾಕಾಂತ ಅ.ಪ.

ಕೋಟಿದಿವಾಕರನಿಭ ಮಕುಟದ ಮಸ್ತಕದ ಮುದ್ದಿನ ಮುಖದ

ನೀಟಹ ಪಣೆಯಲಿ ಮೃಗಮದ ಪುಂಡ್ರ ತಿಲಕದ ನೀಲಾಳಕದ

ಮಾಟಕ ಮದನನ ಬಿಲ್ಲ ಹಳಿವ ಹುಬ್ಬುಗಳ ಇತ್ತಂಡಗಳ

ನೋಟದಿ ದಯಾರಸ ಸೂಸುವ ಕಮಲದಳಗಳ ಸಮನಯನಗಳ ೧

ಎಸೆವ ಸುನಾಸಿಕ ಜ್ವಲಿತ ಕುಂಡಲ ಸ್ಮಿತವದನ ಶಶಿಸಮರದನ

ಹೊಸ ತುಲಸಿಯ ಮಂಜರಿ ವನಮಾಲಾಧರನ ಸತ್ಕಂಧರನ

ಮಿಸುನಿಯ ವೈಜಯಂತಿ ತ್ರಿಸರವು ದಿವ್ಯಪದಕಗಳ ಝಳ ಝಳಪುಗಳ

ಲಸತ್ ಶ್ರೀವತ್ಸ ವಕ್ಷದಿ ಕುಂಕುಮ ಚಂದನದ ಗುಣಗಣಘನದ ೨

ಮರಕತಸ್ತಂಭಗಳಗೆ ಪೋಲ್ವೆಡೆಬಾಹುಗಳ ಅಂಗದಯುಗಳ

ಕರವಲಯಾಂಗುಲಿಮುದ್ರಿಕೆ ಧೃತಕೋದಂಡ ದಂಡಕದಂಡ

ಸಿರಿಜಠರ ತ್ರಿವಳಿ ಗಂಭೀರನಾಭ ನಿರ್ಜರನಾಭ

ವರಪಿಂಗಳ ಕೌಶೇಯಾಂಬರ ಕಟಿಸೂತ್ರ ಶ್ರೀ ಬ್ರಹ್ಮಸೂತ್ರ ೩

ಬಟ್ಟದೊಡೆ ಜಾನು ಘಟ್ಟದಂತೋಪಮ ಜಂಘ ಸಂವೃತ ಜಂಘಾ

ಕುಟಿಲ ನೀ ರಾಕ್ಷಸದಲ್ಲಣ ಪೆಂಡೆಯದ ಚೆಲುವಾ ಜನಜನಿಗೊಲಿವ

ಕಠಿಣತರ ಪದತಳದೆಡೆ ಧ್ವಜಾಂಕುಶಾಂಬುಜ ಹೃತ್ಕಲುಷಾ

ನಿಟಿಲನಯನ ವಿಧಿಸುರ ಋಷಿವಂದಿತ ಚರಣ ನೂಪುರಾಭರಣಳ

ಸುಖಮುನಿ ಮುಖ್ಯಮುನಿ ಪೂಜಿತ ವಿಗ್ರಹ ವಾರಾ ಪಾರ ವಿಹಾರ

ನಿಖಿಲ ಗುಣಾರ್ಣವ ನಿತ್ಯದಯಾರ್ಣವ ರಾಜ ರಾಜಾಧಿರಾಜ

ಸಕಲ ಸಂಯಮಿಕುಲಮೌಳಿರತುನ ಸತ್ಯಪೂರ್ಣಮನೋರಥಪೂರ್ಣ

ಪ್ರಸನ್ವೆಂಕಟಪತಿ ಶ್ರೀ ಭೂಲೋಲ ಭುವನಕೆ ಮೂಲ ೪

೧೬

ವೆಂಕಟಾದ್ರಿವರದ ಶಂಕರನುತಪಾದ ಪ.

ಶಂಖಾರಿ ಅಹಿಪರಿಯಂಕಶಾಯಿ ಉದಾರಿ

ಕಿಂಕರಕೋಶ ಸಂಕಟನಾಶ

ಪಂಕಜನಾಭಾಸಂಖ್ಯಾತ ರವಿಭಾ ೧

ಗಜಬಂಧನ ನಿವಾರಿ ಕುಜಮಸ್ತಕವಿದಾರಿ

ಅಜಮಿಳರಕ್ಷ ನಿಜಜನಪಕ್ಷ

ಕುಜನ ವಿಶಿಕ್ಷಾಂಬುಜ ಪತ್ರಾಕ್ಷ ೨

ಕಂಸ ಮಥನಕಾರಿ ಹಂಸಡಿಬಿಕ ವೈರಿ

ಸಂಶಯಹರ ಗೋಪಾಂಸು ಲಿಪ್ತಾಂಗ ಹಿ

ಮಾಂಶುಕುಲೇಶ ಭವಶರಧಿನಾಶ ೩

ಭೈಷ್ಮೀ ಸತ್ಯಾರಮಣ ಭೂಷಿತ ಅಖಿಳಾಭರಣ

ದ್ವೇಷಕೃತ ದಮಘೋಷಜಹರ ಮ

ಹೀಶೆಜ್ಞ ಭೋಕ್ತಾಗ್ರೇಸರ ಶಕ್ತ ೮

ಸ್ವಾಮಿ ತೀರ್ಥಕರ್ತ ಕಾಮಿತ ಫಲದಾತ

ಸ್ವಾಮಿ ಪ್ರಸನ್ವೆಂಕಟಾಮಲ ಮೂರ್ತಿ

ನಾ ಮೊರೆಹೊಗುವೆ ಪ್ರೇಮದ ಪ್ರಭುವೆ ೯

೧೭

ಹನುಮ ನಮ್ಮ ಕಾಮಧೇನು ಭೀಮ ನಮ್ಮ ಕಲ್ಪವೃಕ್ಷ

ಆನಂದತೀರ್ಥಗುರು ಚಿಂತಾಮಣಿ ಪ.

ಸೂತ್ರರಾಮಾಯಣ ಮಹಾವ್ಯಾಕರ್ಣ ಪಂಚ

ರಾತ್ರ ಭಾರತಪುರಾಣ ಶ್ರುತ್ಯರ್ಥ ಸುಧಾರಸವಾ

ವೇತ್ತೃಜನಕಾ ಸಂತತ ಕಿಂಪುರುಷ ವರುಷದಿ ಉಣ

ಉತ್ತನಾ ಸುಸ್ವರದಿ ಶ್ರೀರಾಮಪ್ರಿಯನು ೧

ರಾಜಸೂಯ ಮೂಲದಿಂದ ಶಾಖೋಪಶಾಖ ಸಧರ್ಮ

ಸೋಜಿಗದ ಕರ್ಮಕುಸುಮ ಬ್ರಹ್ಮತ್ವಫಲದಿ

ರಾಜಿಸುತ್ತ ಸಹಸ್ರಾಕ್ಷ ಸಖಮುಖ್ಯದ್ವಿಜರ್ಗೆ ಸುಖ

ಬೀಜ ನಿಂತು ಹೊರೆದನು ಶ್ರೀಕೃಷ್ಣ ಪ್ರಿಯನು ೨

ಹಂತ ಭಾಷ್ಯಧ್ವಾಂತದಿ ವೇದಾಂತವಡಗೆ ಪೋಕ ಮಣಿ

ಮಂತನ ಮುರಿದನು ಮೂವತ್ತೆರಡು ಲಕ್ಷಣದಿ

ಕಾಂತಿಯಿಂದ ಪ್ರಸನ್ನವೆಂಕಟ ಕಾಂತನ್ನ ಪ್ರಕಾಶಿಸಿದ

ಚಿಂತಿತಾರ್ಥ ನಮಗೀವ ಶ್ರೀವ್ಯಾಸಪ್ರಿಯನು ವೇದವ್ಯಾಸಪ್ರಿಯನು ೩

೧೮

ಶ್ರೀ ವಾದಿರಾಜ ಸಲಹೆನ್ನ ರಾಜ

ಸೇವಕರಿಗಮರ ಭೂಜ ರಾಜ ಪ.

ಪಾವನ ಸುಕೀರ್ತಿ ಚಂದ್ರಿಕೆಯಿಂದ ಥಳಥಳಿಸಿ

ಭೂವಲಯಕಾಹ್ಲಾದವನಿತ್ತೆ ರಾಜ ಅ.ಪ.

ಚತುರ ಹಯಗ್ರೀವ ವಹಿಸಿ ಹೊಳೆವ ದಶ

ಮತಿಶಾಸ್ತ್ರರಥವ ನಿರ್ಮಿಸಿ

ಶ್ರುತಿ ಪಂಚರಾತ್ರವನ್ನು ವಾಜಿಗೈದು

ಋತು ಭೇದಶರ ಒಗ್ಗೂಡಿಸಿನ್ನೆಸೆದು

ಕ್ಷಿತಿಯರ ದುರ್ವಾದಿಗಳ ಜೈಸಿದೆ ಅ

ಪ್ರತಿ ಮಹಾರಥಿಕನೆನಿಸುವ ಚಕ್ರವರ್ತಿ ರಾಜ ೧

ಬೇಕಾದ ಪುರುಷಾರ್ಥವ ಕೊಡುವ ಗುಣ

ಶಾಖೆಗಳ ಸೊಬಗುದೋರೆ

ಶ್ರೀಕರ ಗ್ರಂಥರಚನೆಗಳ ವನೇಕ ಪತ್ರದವುಗಳಿರೆ

ಆ ಕರುಣ ಲೋಚನ ಕುಸುಮರಸವನುಂಡು

ಝೇಂಕರಿಪ ಕವಿ ಮಧು ಮಕರಂದ ರಾಜಿಸುವ ರಾಜ ೨

ಸಾರಾರ್ಥ ಚೋರ ಕುಲದಗಲ ಭೇದಿಸಿ ಸಂ

ಚಾರ ಧರೆಯೊಳಗಿಡಿಸಿ

ಈರಮತಸದ್ವನದಿಹ ಪಂಡಿತ ಚ

ಕೋರಗಳ ನಲಿನಲಿಸಿದೆ

ಧೀರ ವಾಗೀಶಕರವಾರಿಧಿಭವ ವಾದಿವಂದ್ಯ

ವಾರಿನಿಧಿ ನಂದಕರ ಪ್ರಸನ್ವೆಂಕಟಪ್ರಿಯ ೩

೧೯

ಶೇಷಾಚಲನಾಯಕ ಸಲಹಯ್ಯಾ

ಶೇಷದುರಿತ ದೂರಕ ಪ.

ಮಕರಾಲಯಸದನ ಮಾಧವ

ಮಕರಕುಂಡಲ ಕರಣ

ಮಕರಕೇತನ ತಾತ ಮಾಕಾಂತ ವಿಲಸಿತ

ಮಕುಟ ಕೌಸ್ತುಭ ಭೂಷಿತ ಮುಕುಂದ ೧

ಸ್ವಾಮಿಪುಷ್ಕರಿಣೀವಾಸ ಮುಕುಂದ

ಸಾಮಗಾಯನ ವಿಲಾಸ

ಸೋಮ ದ್ಯುಮಣಿ ನಯನಾಬ್ಜಕೊದರ್ವದಳ

ಶ್ಯಾಮ ಸಿರಿ ಭೂಲೋಲ ಮುಕುಂದ ೨

ಸನ್ಮಾರ್ಗವ ತೋರಿಸೊ ಸಂತರ

ಸನ್ನಿದಲ್ಲಿರಿಸೊ

ಶೂನ್ಯ ಭಾಗ್ಯವ ನೋಡಿ ಸಲಹಯ್ಯ ತಂದೆ ಪ್ರ

ಸನ್ನವೆಂಕಟನಾಯಕ ಮುಕುಂದ ೩

೨೦

ಮಂಗಳ ತ್ರಿವೆಂಗಳಪ್ಪ ಮಂಗಳಾಂಗ ರಂಗಗೆ ಶ್ರೀ

ಮಂಗಳೆಯ ಸಂಗಗೆ ಜಗಂಗಳಾಂತರಂಗಗೆ ಪ.

ಕಂಗಳಕ್ಕದಂಗೆ ನಿಖಿಳಾಂಗ ಕಪಟಂ(ಕಮಠಂ?)ಗೆ ಭೂ

ವೆಂಗಳರಸಂಗೆ ನರಸಿಂಗದೇವನಿಗೆ ೧

ತಿಂಗಳೊಲಿದ್ದಗೆ ಖಳರ ಜಂಗುಳ ನಾದ್ದಂಗೆ ಕಲ್ಲ

ವೆಂಗಳ ಮಾಳ್ಪಂಗೆ ಚೆಲ್ವ ಪೊಂಗೊಳಲೂದುವಂಗೆ ೨

ತುಂಗ ಮೋಹನಗೆ ಸತುರಂಗವಾಹನಂಗೆ ವಿ

ಹಂಗಗೆ ಭುಜಂಗಶಯನ ಪ್ರಸನ್ನವೆಂಕಟಂಗೆ ೩